ತಡೆಹಿಡಿಯಂಲಾದ ವೇತನ ಪಾವತಿ

೯೩೦ ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಾಂತ್ರಿಕ ಶಿಕ್ಷಣ ನಿರ್ದೇಶಕರು ಏಪ್ರಿಲ್–ಮೇ ೧೯೬೬ ರಲ್ಲಿ ತಮ್ಮ ಸಿಬ್ಬಂದಿಯಂ ವರ್ಗಾವಣೆ ಮಾಡಿದ್ದ ಆಜ್ಞೆಯನ್ನು ಮುಖ್ಯ ಮಂತ್ರಿಗಳು ತಡೆಹಿಡಿದಿರುವುದು ನಿಜವೇ ? ಹಾಗಿದ್ದಲ್ಲಿ ಆಜ್ಞೆಯನ್ನು ತಡೆಹಿಡಿಯಲು ಕಾರಣಗಳೇನು ?

ಆ) ತಡೆಹಿಡಿದ ಆಜ್ಞೆಯನ್ನು ಪುನರ್‌ವಿಮರ್ಶಿಸಿ ಸಿಬ್ಬಂದಿ. (ಉಪಾಧ್ಯಾಯರುಗಳ) ವರ್ಗದವರನ್ನು ಅವರವರ ಸ್ಥಳಗಳಿಗೆ ವರ್ಗ ಮಾಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ತಡೆಯಾಜ್ಞೆ ವರ್ಗಾವಣೆ ಮತ್ತು ವರ್ಗಾವಣೆಗಳಿಂದಾಗಿ ಸುಮಾರು ೫೫ ಉಪಾಧ್ಯಾಯರು ಗಳಿಗೆ ನಾಲ್ಕು ರಿಂದ ಪಕ್ಕ ತಿಂಗಳವರೆವಿಗೆ ಬರಬೇಕಾಗಿದ್ದ ಸಂಬಳ ಇದುವರೆವಿಗೂ ಅವರಿಗೆ ಕೊಡದೇ ಇರುವುದು ನಿಜವೇ ?

ಈ) ೧೯೬೭ರ ಆಯವ್ಯಯದ ಬಜೆಟ್ ಅಧಿವೇಶನದಲ್ಲಿ ಈ ಸಂಬಳವನ್ನು ಕೊಡಿಸಿ ಕೊಡುವುದಾಗಿ ಶಿಕ್ಷಣ ಸಚಿವರು ಭರವಸೆ ನೀಡಿರುವುದು ನಿಜವೇ ?

ಉ) ಹಾಗಿದ್ದಲ್ಲಿ ಭರವಸೆಯಂತೆ ಈ ಉಪಾಧ್ಯಾಯರುಗಳಿಗೆ ಸಲ್ಲಬೇಕಾದ ಬಾಕಿ ಸಂಬಳವನ್ನು ಅವರಿಗೆ ಕೊಡಲಾಗುತ್ತಿದೆಯೇ ? ಹಾಗಿದ್ದಲ್ಲಿ ಯಾವಾಗ ಕೊಡಲಾಗುವುದು ?

ಶ್ರೀ ಡಾ॥ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ನಿಜ. ಏಪ್ರಿಲ್–ಮೇ ೧೯೬೬ ರ ವರ್ಗಾವಣೆಯಲ್ಲಿ ಸುಮಾರು ೪೫೦ ಅಧಿಕಾರಿ ಹಾಗೂ ನೌಕರರನ್ನು ವರ್ಗಾವಣೆ ಮಾಡಲಾಗಿತ್ತು. ನೌಕರರಿಗೆ ಆದರಲ್ಲೂ ಮಹಿಳಾ ನೌಕರರಿಗೆ ಆದ ತೊಂದರೆಯನ್ನು ನಿವಾರಿಸಲು ಮುಖ್ಯ ಮಂತ್ರಿಯವರು ತಡೆಯಾಜ್ಞೆ ನೀಡಿದ್ದರು.

ಆ) ಬಂದಿದೆ.

ಇ) ನಿಜ. ಇದರಲ್ಲಿ ೩೨ ಮಂದಿ ಶಿಕ್ಷಕರು ಇದ್ದು ಉಳಿದ ೨೧ ಮಂದಿ ಸಿಬ್ಬಂದಿ ವರ್ಗಕ್ಕೆ ಸೇರಿದವರಾಗಿದ್ದಾರೆ.

ಈ)ಮತ್ತು ಉ) ಈ ಬಗ್ಗೆ ಸರ್ಕಾರದಲ್ಲಿ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದ್ದು, ಶೀಘ್ರದಲ್ಲಿಯೇ ತೀರ್ಮಾನಿಸಲಾಗುವುದು.

ಉಚಿತ ಪಠ್ಯ ಪುಸ್ತಕಗಳು

೧೨೬ ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲು ಪೇಟೆ).— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಂತ ಉಚಿತ ಪಠ್ಯ ಪುಸ್ತಕಗಳ ಸೌಲಭ್ಯವನ್ನು ಪಡೆದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು) ?

ಆ) ಈ ಉದ್ದೇಶಕ್ಕಾಗಿ ೧೯೬೭–೬೮ನೇ ಸಾಲಿನಲ್ಲಿ ಸರ್ಕಾರದವರು ಖರ್ಚು ಮಾಡಿರುವ ಹಣವೆಷ್ಟು ?

ಇ) ಶಾಲೆಗಳು ಪ್ರಾರಂಭವಾದ ೩–೪ ತಿಂಗಳುಗಳಾದರೂ ಸಹ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ದೊರೆಯಿಸುತ್ತಿಲ್ಲವೆಂಬ ದೂರು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ಉಚಿತ ಪಠ್ಯ ಪುಸ್ತಕಗಳನ್ನು ಪಡೆದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: ೬೦,೦೨,೧೯೭